ಆರ್‌ಬಿಐ/2006–07/220
ಆರ್.ಪಿ.ಸಿ.ಡಿ. ಸಿ.ಒ.ಅರ್.ಆರ್.ಬಿ.ಬಿಸಂಖ್ಯೆ.39/03.05.33(2)/2006–07

ಡಿಸೆಂಬರ್ 26, 2006

ಎಲ್ಲಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ

ಮಾನ್ಯರೆ

ಚೆಕ್ ಡ್ರಾಪ್ ಬಾಕ್ಸ್ ಸೌಲಭ್ಯ ಮತ್ತು ಚೆಕ್ ಸ್ವೀಕೃತಿ ಸೌಲಭ್ಯ

ಹಲವಾರು ಬ್ಯಾಂಕು ಶಾಖೆಗಳಲ್ಲಿ ಚೆಕ್‌ಗಳನ್ನು ಕೌಂಟರ್‌ಗಳಲ್ಲಿ ಸ್ವೀಕರಿಸಲಾಗುತ್ತಿಲ್ಲ ಮತ್ತು ಚೆಕ್‌ಗಳನ್ನು ಚೆಕ್ ಡ್ರಾಪ್ ಬಾಕ್ಸ್‌ನಲ್ಲೇ ಹಾಕುವಂತೆ ಗ್ರಾಹಕರನ್ನು ಒತ್ತಾಯಿಸಲಾಗುತ್ತಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಬ್ಯಾಂಕಿಂಗ್ ಲೋಕಪಾಲರ ಕಛೇರಿಗೆ ಅನೇಕ ದೂರುಗಳು ಬರುತ್ತಲಿವೆ.

2. ಈ ನಿಟ್ಟಿನಲ್ಲಿ, ಗ್ರಾಹಕರು ಚೆಕ್ ಡ್ರಾಪ್ ಬಾಕ್ಸ್‌ನಲ್ಲಿ ಚೆಕ್‌ಗಳನ್ನು ಹಾಕಬೇಕೆಂದು ಒತ್ತಾಯ ಮಾಡಕೂಡದೆಂದು ಬ್ಯಾಂಕುಗಳಿಗೆ ಆದೇಶಿಸಲಾಗಿದೆ. ಚೆಕ್ ಡ್ರಾಪ್ ಸೌಲಭ್ಯ ಜತೆಯಲ್ಲಿಯೇ ಚೆಕ್‌ಗಳನ್ನು ಚೆಕ್ ಮೌಲ್ಯ ಸಂಗ್ರಹಣಾ ಕೌಂಟರ್‌ಗಳಲ್ಲಿ ಪಡೆದು ಸ್ವೀಕೃತಿ ನೀಡುವ ಸೌಲಭ್ಯವನ್ನು ಗ್ರಾಹಕರಿಗೆ ನಿರಾಕರಿಸಲಾಗದು. ಗ್ರಾಹಕರು ಕೌಂಟರ್‌ಗಳಲ್ಲಿ ನೀಡುವ ಚೆಕ್‌ಗಳಿಗೆ ಸ್ವೀಕೃತಿಯನ್ನು ನೀಡಲು ಯಾವುದೇ ಶಾಖೆಯೂ ನಿರಾಕರಿಸಕೂಡದು.

3. ಗ್ರಾಹಕರು ಈ ಸಂಬಂಧವಾಗಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಲು ಅನುವಾಗುವಂತೆ ಚೆಕ್ ಡ್ರಾಪ್ ಸೌಲಭ್ಯಗಳಿರುವ ಕಡೆಯಲ್ಲೆಲ್ಲಾ ಚೆಕ್ ಡ್ರಾಪ್ ಬಾಕ್ಸ್ ಸೌಲಭ್ಯ ಹಾಗೂ ಕೌಂಟರ್‌ಗಳಲ್ಲಿ ಚೆಕ್ ಸ್ವೀಕೃತಿ ಈ ಎರಡೂ ಆಯ್ಕೆಗಳ ಬಗ್ಗೆ ಗ್ರಾಹಕರ ಗಮನಕ್ಕೆ ತರುವುದು ಅತ್ಯಗತ್ಯ. ಆದ್ದರಿಂದ ಬ್ಯಾಂಕುಗಳು ಚೆಕ್ ಡ್ರಾಪ್ ಬಾಕ್ಸ್‌ಗಳ ಮೇಲೆಯೇ ಈ ಕೆಳಗಿನಂತೆ ಕಡ್ಡಾಯವಾಗಿ ಸೂಚನೆಯನ್ನು ಪ್ರದರ್ಶಿಸಲು ಆದೇಶಿಸಲಾಗಿದೆ.

"ಗ್ರಾಹಕರು ಕೌಂಟರ್ ಗಳಲ್ಲೂ ಚೆಕ್ ಗಳನ್ನು ಸಲ್ಲಿಸಿ ಸಂದಾಯ ಚೀಟಿ ಮೇಲೆ ಸ್ವೀಕೃತಿ ದೃಢೀಕರಣವನ್ನು ಪಡೆಯಬಹುದಾಗಿದೆ"

ಈ ಮೇಲಿನ ಸೂಚನೆಯನ್ನು ಇಂಗ್ಲೀಷ್, ಹಿಂದಿ ಹಾಗೂ ಆ ರಾಜ್ಯದ ಪ್ರಾದೇಶಿಕ ಭಾಷೆಯಲ್ಲಿ ಪ್ರದರ್ಶಿಸಬಹುದು.

4. ತಲುಪಿದ ಬಗ್ಗೆ ಸಂಬಂಧಪಟ್ಟ ನಮ್ಮ ಪ್ರಾದೇಶಿಕ ಕಛೇರಿಗಳಿಗೆ ದಯವಿಟ್ಟು ಸ್ವೀಕೃತಿ ನೀಡುವುದು.

ತಮ್ಮ ವಿಶ್ವಾಸಿ

(ಜಿ. ಶ್ರೀನಿವಾಸನ್)
ಮುಖ್ಯ ಪ್ರಧಾನ್ ವ್ಯವಸ್ಥಾಪಕರು